ಸಾಕ್ಷಿಯನ್ನು ದಿಃ 23.01.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

**ಮಧ್ಯಂತರ ಅರ್ಜಿ 1 ರ ಮೇಲಿನ ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ :**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದ ಸಂಗತಿಗಳು ಎಲ್ಲಾ ಸತ್ಯವಾಗಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ ಎದುರುದಾರರ ಪರ ಡಿಜಿಪಿ ರವರಿಂದ**

1. ದಡದಹಳ್ಳಿ ಗ್ರಾಮದ ಸರ್ವೆ ನಂಬರ್ 113/2 ಮತ್ತು 113/3 ರಲ್ಲಿ ಒಟ್ಟು 0.6.25 ಗುಂಟೆ ಜಮೀನು ಭೂ ಸ್ವಾಧೀನವಾಗಿದೆ. ಸ್ವಾಧೀನವಾದ ಈ 0.6.25 ಗುಂಟೆ ಜಮೀನಿಗೆ ನಾನು ಪರಿಹಾರದ ಹಣವನ್ನು ಪಡೆದುಕೊಂಡಿದ್ದೇನೆ. ಅವತ್ತಿನ ಕಾಲಕ್ಕೆ ಅ ಪರಿಹಾರದ ಹಣ ಕಾನೂನುಬದ್ಧವಾಗಿತ್ತು ಎಂದರೆ ಸರಿಯಲ್ಲ.

2. ನಮ್ಮ ಗ್ರಾಮದ ಇತರೆ ಜನರಿಗೆ ಹೆಚ್ಚಿನ ಪರಿಹಾರ ಬಂದಿರುತ್ತದೆ. ಸದರಿಯವರ ಜಮೀನಿನ ಸರ್ವೆ ನಂಬರ್ ಎಷ್ಟು ಮತ್ತು ಅವರು ಎಷ್ಟು ಪರಿಹಾರ ಪಡೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅಂತೆಯೇ ಅವರು ಹಾಕಿದ್ದ ಕೇಸ್ ನಂಬರ್ ಸಹ ನನಗೆ ಗೊತ್ತಿಲ್ಲ.

3. 4527 ದಿನಗಳ ತಡವಾಗಿ ಅಪೀಲನ್ನು ಸಲ್ಲಿಸಿರುವುದಕ್ಕೆ ಸಕಾರಣಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಾನು ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು